**ಸಮಗ್ರ ಶಿಕ್ಷಣ – ಕರ್ನಾಟಕ**

**ಉಪನಿರ್ದೇಶಕರು ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,**

**ಸಮಗ್ರ ಶಿಕ್ಷಣ – ಕರ್ನಾಟಕ, ತುಮಕೂರು (ಆರ್.ಎಂ.ಎಸ್.ಎ), ತುಮಕೂರು(ದ)ಜಿಲ್ಲೆ**

**ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣೆ ಸಮಿತಿ [ಇಕೋ-ಕ್ಲಬ್]**

**ಸಭೆಯ ನಡಾವಳಿ**

ದಿನಾಂಕ:16-09-2020 ರಂದು ಮಾನ್ಯ ಜಿಲ್ಲಾಧಿಕಾರಿಗಳು ತುಮಕೂರು ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ 2020-21ನೇ ಸಾಲಿನ ಜಿಲ್ಲಾ ಅನುಷ್ಠಾನ ಮೇಲ್ವಿಚಾರಣಾ ಸಮಿತಿ ಸಭೆ ನಡೆಸಲಾಯಿತು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು**

1. ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ.
2. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು(ದ)
3. ಜಿಲ್ಲಾ ಅರಣ್ಯಾಧಿಕಾರಿಗಳು, ತುಮಕೂರು
4. ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ತುಮಕೂರು
5. ಸಂಪನ್ಮೂಲ ಸಂಸ್ಥೆಯ ಸದಸ್ಯರು, ಸಿ.ಪಿ.ಆರ್. ಪರಿಸರ ಶಿಕ್ಷಣ ಕೇಂದ್ರ ಬೆಂಗಳೂರು
6. ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ತುಮಕೂರು
7. ಉಪಾಧ್ಯಕ್ಷರು, ತುಮಕೂರು ವಿಜ್ಞಾನ ಕೇಂದ್ರ, ತುಮಕೂರು.
8. ಉಪಯೋಜನಾ ಸಮನ್ವಯಾಧಿಕಾರಿಗಳು, ಎಸ್.ಎಸ್.ಎ, ಸಾ.ಶಿ.ಇಲಾಖೆ, ತುಮಕೂರು
9. ಉಪಯೋಜನಾ ಸಮನ್ವಯಾಧಿಕಾರಿಗಳು, ಆರ್.ಎಂ.ಎಸ್.ಎ, ಸಾ.ಶಿ.ಇಲಾಖೆ, ತುಮಕೂರು
10. ಉಪಯೋಜನಾ ಸಮನ್ವಯಾಧಿಕಾರಿಗಳು, ಆರ್.ಎಂ.ಎಸ್.ಎ, ಸಾ.ಶಿ.ಇಲಾಖೆ, ಮಧುಗಿರಿ
11. ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಜಿನ್ನಾಗರ, ಕುಣಿಗಲ್ ತಾ॥
12. ಮುಖ್ಯ ಶಿಕ್ಷಕರು, ಸರ್ಕಾರಿ ಪ್ರಾಥಮಿಕ ಪಾಠಶಾಲೆ, ಬಿಳಿಗೆರೆ, ಗುಬ್ಬಿ ತಾ॥
13. ಮುಖ್ಯ ಶಿಕ್ಷಕರು, ಸರ್ಕಾರಿ ಪ್ರಾಥಮಿಕ ಪಾಠಶಾಲೆ, ಕಾತ್ರಿಕೆಹಾಲ್, ಚಿ.ನಾ.ಹಳ್ಳಿ ತಾ॥
14. ಉಪಪ್ರಾಂಶುಪಾಲರು, ಕೆ.ಪಿ.ಎಸ್. ನೊಣವಿನಕೆರೆ, ತಿಪಟೂರು ತಾ॥
15. ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಕೊಟಗಾರಲಹಳ್ಳಿ, ಮಧುಗಿರಿ ತಾ॥
16. ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಕೊಡ್ಲಹಳ್ಳಿ, ಕೊರಟಗೆರೆ ತಾ॥
17. ಉಪಪ್ರಾಂಶುಪಾಲರು, ಕೆ.ಪಿ.ಎಸ್. ಬೆಳ್ಳಾವಿ, ತುಮಕೂರು ತಾ॥

ಶ್ರೀ ರಂಗಧಾಮಪ್ಪ ಸಿ. ರವರು, ಉಪಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ ತುಮಕೂರು, ಇವರು ಸಭೆಗೆ ಎಲ್ಲರನ್ನು ಸ್ವಾಗತಿಸಿದರು. ತದನಂತರ 2019-20ನೇ ಸಾಲಿನ ಶಾಲೆಗಳಲ್ಲಿ ಇಕೋ-ಕ್ಲಬ್ ಅಡಿಯಲ್ಲಿ ಕೈಗೊಂಡ ಚಟುವಟಿಕೆಗಳನ್ನು ಪಿ.ಪಿ.ಟಿ ಮುಖಾಂತರ ತುಮಕೂರು ಮತ್ತು ಮಧುಗಿರಿ ಶೈಕ್ಷಣಿಕ ಜಿಲ್ಲೆಯಲ್ಲಿ ಇಕೋ-ಕ್ಲಬ್ ಅನುಷ್ಠಾನ ಬಗ್ಗೆ ವರದಿ ಮಂಡಿಸಲಾಯಿತು. ಎಂಪ್ರಿ ಸಂಸ್ಥೆ ಸ್ಥಾಪನೆ ಹಾಗೂ ರಾಜ್ಯ ನೋಡಲ್ ಏಜೆನ್ಸಿಯಾಗಿ ಕಾರ್ಯ ನಿರ್ವಹಣೆ ಬಗ್ಗೆ ಮಾಹಿತಿ ನೀಡಲಾಯಿತು. ತುಮಕೂರು(ದ)ಹಾಗೂ ಮಧುಗಿರಿ ಶೈಕ್ಷಣಿಕ ಜಿಲ್ಲೆಗಳ ತಲಾ 500 ಶಾಲೆಗಳಲ್ಲಿ ಇಕೋ-ಕ್ಲಬ್ ಗಳನ್ನು ಸ್ಥಾಪಿಸಲಾಗಿದೆ ಈ ಬಗ್ಗೆ ಅಂಕಿ ಅಂಶಗಳನ್ನು ಹಾಗೂ ಮಾಹಿತಿಯನ್ನು ಬ್ಲಾಕ್‌ವಾರು ಮಂಡಿಸಲಾಯಿತು. ಶಾಲೆಗಳಲ್ಲಿ ಶಾಲಾವನ, ಶಾಲಾ ಕೈತೋಟಗಳ ನಿರ್ಮಾಣವಾಗಿರುವ ಬಗ್ಗೆ ಹಾಗೂ ಪರಿಸರ ಜಾಗೃತಿಗಾಗಿ ಕೈಗೊಂಡ ಚಟುವಟಿಕೆಗಳ ಬಗ್ಗೆ ವಿವರವಾದ ವರದಿ ಮಂಡಿಸಲಾಯಿತು.

ಸರ್ಕಾರಿ ಪ್ರಾಥಮಿಕ ಶಾಲೆ, ಕಾತ್ರಿಕೆಹಾಲ್, ಚಿ.ನಾ.ಹಳ್ಳಿ ತಾ. ಶಾಲಾ ವಿಜ್ಞಾನ ಶಿಕ್ಷಕರು, ತಮ್ಮ ಶಾಲೆಯಲ್ಲಿ ಹಸಿರು ಭೂಮಿ ಇಕೋ-ಕ್ಲಬ್ ವತಿಯಿಂದ ತಮ್ಮ ಶಾಲೆಯಲ್ಲಿ ಮಾಡಿದ ಚಟುವಟಿಕೆಗಳನ್ನು ವಿವರಿಸಿದರು. ಪರಿಸರ ಸಂರಕ್ಷಣೆ, ಪರಿಸರ ಜಾಗೃತಿ, ಸಸ್ಯ ನೆಡುವುದು, ಪೋಷಿಸುವುದು, ಸ್ವಚ್ಛತೆ, ಪ್ಲಾಸ್ಟಿಕ್ ಮುಕ್ತ ಶಾಲೆ, ಔಷಧಿ ಸಸ್ಯ ಗುರುತಿಸುವ ಕೌಶಲ, ಎರೆಹುಳು ಗೊಬ್ಬರ ತಯಾರಿಕೆ, ಮಳೆ ನೀರು ಕೊಯ್ಲು ಮುಂತಾದ ಚಟುವಟಿಕೆಗಳನ್ನು 2019-20ನೆ ಸಾಲಿನಲ್ಲಿ ಇಕೋ-ಕ್ಲಬ್ ಮೂಲಕ ಮಾಡಲಾಯಿತು. ಇದರಿಂದ ಶಾಲಾ ಸ್ವಚ್ಛತೆ, ಆಕರ್ಷಣೆ ಉಂಟಾಯಿತು ಮತ್ತು ಮಕ್ಕಳ ದಾಖಲಾತಿ ಸಹ 130 ರಿಂದ 170 ಕ್ಕೆ ಏರಿತು ಎಂದು ಯಶೋಗಾಥೆಯನ್ನು ಸಭೆಗೆ ಮನವರಿಕೆ ಮಾಡಿದರು. ಇದೇ ರೀತಿ ಹಲವು ಶಾಲೆಗಳು ಅನುಷ್ಠಾನ ಮಾಡಿರುತ್ತವೆ. ಅದಕ್ಕೆ ಪೂರಕ ವರದಿಗಳನ್ನು ಕಛೇರಿಗೆ ನೀಡಿದ್ದಾರೆಂದು ಉಪಯೋಜನಾ ಸಮನ್ವಯಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಜಿಲ್ಲಾಧಿಕಾರಿಗಳು 2020-21ನೇ ಸಾಲಿನ ಇಕೋ-ಕ್ಲಬ್ ಚಟುವಟಿಕೆಗಳನ್ನು ನಡೆಸಲು ಈ ಕೆಳಕಂಡಂತೆ ಸಲಹೆಗಳನ್ನು ನೀಡಿದರು.

- 2020-21ನೆ ಸಾಲಿನಲ್ಲಿ ಜಿಲ್ಲೆಯ ಇಕೋ-ಕ್ಲಬ್ ಕಾರ್ಯಕ್ರಮ ಅನುಷ್ಠಾನಗೊಂಡಿರುವ ಶಾಲೆಗಳಲ್ಲಿ ಶಾಲಾ ಆವರಣ, ಗೋಡೆಯ ಸುತ್ತ ನೆರಳು ನೀಡುವ ಮರಗಳನ್ನು ಬೆಳೆಸಲು, ಸಸಿಗಳನ್ನು ನೆಡುವುದು.
- ಶಾಲೆಗಳಲ್ಲಿ ಕೈ ತೋಟಗಳನ್ನು ಬೆಳೆಸಬೇಕು, ವಿವಿಧ ರೀತಿಯ ಹೂ-ಗಿಡಗಳನ್ನು ಬೆಳೆಸಬೇಕು ಈ ಹೂವಿನ ತೋಟ/ವನಕ್ಕೆ ವಿವಿಧ ರೀತಿಯ ಬಣ್ಣಗಳ ಚಿಟ್ಟೆಗಳನ್ನು ಆಕರ್ಷಿಸುವ ಹೂವಿನ ತಳಿಗಳನ್ನು ಬೆಳೆಸುವುದು. ಈ ರೀತಿ ಹೂವಿನ ತಳಿಗಳ ಬಗ್ಗೆ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗದ ಪರಿಣಿತರಿಂದ ಮಾಹಿತಿ ಪಡೆಯುವುದು. ಇಂತಹ ಹೂವಿನ ಗಿಡಗಳನ್ನು ತೋಟಗಾರಿಕಾ ಇಲಾಖೆಯಿಂದ ಪಡೆಯುವುದು. ಈ ಚಟುವಟಿಕೆಯನ್ನು ಶಾಲೆಗಳಲ್ಲಿ ಇಕೋ-ಕ್ಲಬ್ ಮೂಲಕ ಮಾಡುವುದರಿಂದ ಜೀವ ವೈವಿಧ್ಯತೆ ವಿಕಸನವಾಗುತ್ತದೆ. ಈ ರೀತಿ ಬೆಳೆಸಿದ ಗಿಡಗಳನ್ನು ತರಗತಿವಾರು ದತ್ತು ನೀಡಿ ಪೋಷಣೆ ಮಾಡುವ ವ್ಯವಸ್ಥೆ ಮಾಡುವುದು. ಈ ಎಲ್ಲಾ ಕೈಗೆಲಸಗಳನ್ನು ವಿದ್ಯಾರ್ಥಿಗಳೇ ಮಾಡುವಂತೆ ಕ್ರಮವಹಿಸುವುದು. ಇದರಿಂದ ವಿದ್ಯಾರ್ಥಿಗಳಿಗೆ ಕೆಲಸ ಮಾಡುವುದು, ಉಪಕರಣಗಳನ್ನು ಬಳಸುವ ಕಲೆ ಮತ್ತು ಸಸ್ಯಗಳ ಪರಿಚಯ, ಉಪಯೋಗ, ಪರಿಸರ ಸಮತೋಲನ ಇತ್ಯಾದಿ ವಿಷಯಗಳ ನೇರ ಅನುಭವಗಳು ಲಭಿಸುತ್ತವೆ.
- ತುಮಕೂರು ಜಿಲ್ಲೆಯು ವೈವಿದ್ಯತೆಯ ತಾಣವಾಗಿದೆ ಆದ್ದರಿಂದ ಇಕೋ-ಕ್ಲಬ್ ಚಟುವಟಿಕೆಗಳ ಮೂಲಕ ಸ್ಥಳೀಯವಾಗಿ ವಾಸಿಸುವ ಪ್ರಾಣಿ, ಪಕ್ಷಿ-ಕೀಟಗಳು, ಬೆಳೆದಿರುವ ಸಸ್ಯಗಳ ಮಾಹಿತಿ/ಚಿತ್ರಗಳನ್ನು ಸಂಗ್ರಹಿಸಿ ಹೆಸರು ಸಹಿತ ಪಟ್ಟಿ ಮಾಡಿ ಕನ್ನಡ ಮತ್ತು ಇಂಗ್ಲೀಷನಲ್ಲಿ ದಾಖಲಿಸುವುದು. ಇಂತಹ ಸ್ಥಳೀಯ ವೈವಿದ್ಯಗಳ ಬಗ್ಗೆ ಇಕೋ-ಕ್ಲಬ್ ಮೂಲಕ ಹೆಚ್ಚಿನ ಅಧ್ಯಯ ಕೈಗೊಳ್ಳುವುದಕ್ಕೆ ಪೂರಕವಾದ ಯೋಜನೆ/ಸರ್ವೆ/ಪ್ರಾಜೆಕ್ಟ್/ ಪರಿಸರ ಪಯಣ ಮುಂತಾದ ಹವ್ಯಾಸಗಳನ್ನು ಬೆಳೆಸುವ ಚಟುವಟಿಕೆಗಳನ್ನು ಇಕೋ-ಕ್ಲಬ್ ಮೂಲಕ ಹಮ್ಮಿಕೊಳ್ಳುವುದು.

ಒಟ್ಟಾರೆ ಜಿಲ್ಲೆಯಲ್ಲಿ ಇಕೋ-ಕ್ಲಬ್‌ಗಳ ಮೂಲಕ ಪರಿಸರ ಪ್ರೀತಿ, ರಕ್ಷಣೆ ಹಾಗೂ ಪರಿಸರದೊಂದಿಗೆ ಬಾಳುವಾಗ ದೊರೆಯುವ ಆನಂದಗಳನ್ನು ಮಕ್ಕಳು ಅನುಭವಿಸುವ ಹವ್ಯಾಸವನ್ನು ತಮ್ಮ ಜೀವನದ ಅವಿಭಾಜ್ಯ ಅಂಗವನ್ನಾಗಿಸಿಕೊಳ್ಳುವಂತೆ ಅನುಷ್ಠಾನ ಮಾಡಬೇಕು. ಇದಕ್ಕಾಗಿ ಶಿಕ್ಷಕರಿಗೆ ಸಂಘ ಸಂಸ್ಥೆಗಳ ಮೂಲಕ ತರಬೇತಿ ನೀಡಲು ಸೂಚಿಸಿದರು.

ಮಾನ್ಯ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು ರವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲರನ್ನು ವಂದಿಸಿದರು.

ಜಿಲ್ಲಾಧಿಕಾರಿಗಳು
ಜಿಲ್ಲಾಧಿಕಾರಿಗಳ ಕಛೇರಿ
ತುಮಕೂರು ಜಿಲ್ಲೆ,

ಪ್ರತಿಯನ್ನು:-

1. ಎಂಪ್ರಿ ಸಂಸ್ಥೆ, ಬೆಂಗಳೂರು
2. ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ತುಮಕೂರು
3. ಸಂಪನ್ಮೂಲ ಸಂಸ್ಥೆಯ ಸದಸ್ಯರು, ಸಿ.ಪಿ.ಆರ್. ಪರಿಸರ ಶಿಕ್ಷಣ ಕೇಂದ್ರ ಬೆಂಗಳೂರು.
4. ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ತುಮಕೂರು
5. ಜಿಲ್ಲಾ ಪರಿಸರ ಅಧಿಕಾರಿಗಳು, ಮಾಲಿನ್ಯ ನಿಯಂತ್ರಣ ಮಂಡಳಿ, ತುಮಕೂರು ಜಿಲ್ಲೆ.
6. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು ಜಿಲ್ಲೆ.
7. ಉಪಾಧ್ಯಕ್ಷರು, ತುಮಕೂರು ವಿಜ್ಞಾನ ಕೇಂದ್ರ, ತುಮಕೂರು.
8. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು ಮತ್ತು ಮಧುಗಿರಿ.
9. ರೀಡ್ ಬುಕ್ ಫೌಂಡೇಷನ್,ಎನ್.ಜಿ.ಓ. ತುಮಕೂರು.
10. ಮಡಿಲು ಸೇವಾ ಟ್ರಸ್ಟ, ಗುಬ್ಬಿ.
11. ತುಮಕೂರು ಜಿಲ್ಲೆಯ ಎಲ್ಲಾ ಇಕೊ-ಕ್ಲಬ್ ಶಾಲೆಗಳ ಮುಖ್ಯೋಪಾಧ್ಯಾಯರುಗಳು.
12. ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ, ತುಮಕೂರು. 13) ಕಛೇರಿ ಪ್ರತಿ.